ಪಿ. ಡಬ್ಲ್ಯೂ ಃ 2

**ಸಾಕ್ಷಿಗೆ ದಿನಾಂಕ 10.10.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ 18 ರಿಂದ 25 ನೇ ಪ್ರತಿವಾದಿ ಪರ ಶ್ರೀ M.R.L ವಕೀಲರಿಂದ**

3 ನೇ ಪ್ರತಿವಾದಿಯ ಬಗ್ಗೆ ನನಗೆ ಗೊತ್ತಿಲ್ಲ. ಕುಳ್ಳಯ್ಯರವರಿಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. ಸುಶೀಲಮ್ಮ 9 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ಪಾಪಯ್ಯ ಹಾಗೂ 9 ನೇ ಪ್ರತಿವಾದಿಯವರಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. 12, 18 ರಿಂದ 25 ನೇ ಪ್ರತಿವಾದಿಯವರು ನನಗೆ ಗೊತ್ತಿಲ್ಲ. ಅವುರುಗಳನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ಗೊತ್ತಿಲ್ಲ. ದಾವೆಯನ್ನು ಸಲ್ಲಿಸಲು ಮೃತ 1 ನೇ ವಾದಿ ಹಾಗೂ 2 ನೇ ವಾದಿ ಮಾಹಿತಿ ನೀಡಿರುತ್ತಾರೆ. ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ನನಗೆ ಮಾಹಿತಿ ಇಲ್ಲ. ಮರಿಸಿದ್ದಯ್ಯ ಹಾಗೂ ಕಾಳಮ್ಮರವರಿಗೆ ಜೋಗಯ್ಯ, ಕುಳ್ಳಯ್ಯ, ಜವರಯ್ಯ ಹಾಗೂ ವೆಂಕಟಯ್ಯ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.ಪುಟ್ಟಸಿದ್ದಮ್ಮ ಹಾಗೂ ಸಣ್ಣಮ್ಮ ಜೋಗಯ್ಯರವರ ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಖಾತೆ ನನ್ನ ತಾತನ ಹೆಸರಿನಲ್ಲಿದೆ. ದಾವಾ ಸ್ವತ್ತಿನ ದಾಖಲೆಗಳು ಪಹಣಿ ಪತ್ರಿಕೆಯ ಪ್ರಕಾರ ವೆಂಕಟಯ್ಯ ಬಿನ್ ಸಿದ್ದಯ್ಯ, ಪುಟ್ಟತಾಯಮ್ಮ ಕೋಂ ಮೋಟಯ್ಯ, ಶಾಂತಮ್ಮ ಕೋಂ ಚೆಲುವರಾಜು, ಕೆಂಪಮ್ಮ ಕೋಂ ಕುಳ್ಳಯ್ಯರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿಯವರ ಹೆಸರಿಗೆ ಹೇಗೆ ಖಾತೆ ಬದಲಾವಣೆ ಆಯಿತು ಎಂದು ನನಗೆ ಗೊತ್ತಿಲ್ಲ. ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ನಿಪಿ-5 ರಿಂದ 7 ದಾಖಲೆಗಳಲ್ಲಿ ವೆಂಕಟಯ್ಯ ಬಿನ್ ಸಿದ್ದಯ್ಯ, ಪುಟ್ಟತಾಯಮ್ಮ ಕೋಂ ಮೋಟಯ್ಯ, ಶಾಂತಮ್ಮ ಕೋಂ ಚೆಲುವರಾಜು, ಕೆಂಪಮ್ಮ ಕೋಂ ಕುಳ್ಳಯ್ಯರವರ ಹೆಸರು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಿದ್ದಯ್ಯರವರ ಗಂಡು ಮಕ್ಕಳು ದಾವಾ ಸ್ವತ್ತುಗಳಲ್ಲಿ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 1996 ರಲ್ಲಿ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಎಮ್.ಆರ್ 33/1998-99 ರ ಪ್ರಕಾರ ಖಾತೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಕುಳ್ಳಯ್ಯ,

ಜವರಯ್ಯ, ವೆಂಕಟಯ್ಯರವರು ತೀರಿಕೊಂಡ ನಂತರ ಅವರ ಮಕ್ಕಳ ಹೆಸರಿಗೆ ಪೋತಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಪುಟ್ಟಸಿದ್ದಮ್ಮ, 2 ನೇ ವಾದಿ ಜೋಗಯ್ಯರವರ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟಯ್ಯ ಬಿನ್ ಸಿದ್ದಯ್ಯ, ಪುಟ್ಟತಾಯಮ್ಮ ಕೋಂ ಮೋಟಯ್ಯ, ಶಾಂತಮ್ಮ ಕೋಂ ಚೆಲುವರಾಜು, ಕೆಂಪಮ್ಮ ಕೋಂ ಕುಳ್ಳಯ್ಯರವರ ಖಾತೆಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ನಾನು ಮಾಡಿಲ್ಲ ನನ್ನ ತಾಯಿ ಪ್ರಶ್ನೆ ಮಾಡಿರಬಹುದು ಎಂದು ನುಡಿಯುತ್ತಾರೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾಖಲೆಗಳನ್ನು ಹಾಜರುಪಡಿಸಿಲ್ಲ ಯಾವುದೇ ತೊಂದರೆ ಇಲ್ಲ.

ಸಿದ್ದಯ್ಯರವರು ಚಕ್ರತನ ಮಾಡುತ್ತಿದ್ದರಿಂದ ಅವರ ಮನೆತನದವರೇ ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೋಗಬೇಕು ಎಂದರೆ ಸಾಕ್ಷಿ ನನ್ನ ತಾತ ಜೋಗಯ್ಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಜೋಗಯ್ಯರವರು ತೀರಿಕೊಂಡು ನಂತರ ಅವರ ಅಣ್ಣ-ತಮ್ಮಂದಿರುವ ಚಕ್ರತನ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾನು ಚಿಕ್ಕವಯಸ್ಸಿನಲ್ಲಿ ನೋಡಿರುತ್ತೇನೆ. ದಾವಾ ಸ್ವತಿನಲ್ಲಿ ವೆಂಕಟಯ್ಯ ಬಿನ್ ಸಿದ್ದಯ್ಯ, ಪುಟ್ಟತಾಯಮ್ಮ ಕೋಂ ಮೋಟಯ್ಯ, ಶಾಂತಮ್ಮ ಕೋಂ ಚೆಲುವರಾಜು, ಕೆಂಪಮ್ಮ ಕೋಂ ಕುಳ್ಳಯ್ಯರವರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಾಳು ಬಿದ್ದಿದೆ ಯಾರು ಸಹ ಉಳುಮೆ ಮಾಡುತ್ತಿಲ್ಲ ಯಾವ ಆಧಾರದ ಮೇಲೆ ಹೇಳುತ್ತಿರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಜಮೀನುಗಳು ಪಾಳು ಬಿದ್ದಿವೆ ಎಂದು ಹೇಳಿ ಬರೆಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ.

ದಾವಾ ಜಮೀನುಗಳು ಎಷ್ಟು ಬೆಲೆ ಬಾಳುತ್ತವೆ ಎಂದು ನನಗೆ ಗೊತ್ತಿಲ್ಲ. 2008 ರಲ್ಲಿ ದಾವಾ ಸ್ವತ್ತುಗಳು 50 ಲಕ್ಷಕ್ಕಿಂತ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಜೋಗಯ್ಯರವರಿಗೂ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪುಟ್ಟಸಿದ್ದಮ್ಮರವರ ಭಾಗದ

ಆಸ್ತಿಯನ್ನು ಈಗಾಗಲೇ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಕಂದಾಯ ದಾಖಲೆಗಳು ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 93, 94, 99 ಜಮೀನುಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ. ಚೆಕ್ಕುಬಂದಿ ಹಾಗೂ ವಿಸ್ತೀರ್ಣ ಗೊತ್ತಿಲ್ಲ. ಸುಳ್ಳು ಚೆಕ್ಕುಬಂದಿ ತೋರಿಸಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ಕುಬಂದಿಯ ಪ್ರಕಾರ ಯಾರು ಸ್ವಾಧೀನದಲ್ಲಿದ್ದಾರೆ ಗೊತ್ತಿಲ್ಲ. ದಾವಾ ಐಟಂ ನಂಬರ-4 ಕ್ಕೆ ಯಾವುದೇ ಆಸ್ತಿ ಸಂಖ್ಯೆ ಹಾಗೂ ಜಂಜರ ನಂಬರ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಾನು ವಿದ್ಯಾಭ್ಯಾಸ ಮಾಡಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ-4 ಕ್ಕೆ ಸಂಬಂಧಿಸಿದಂತೆ ನನ್ನ ತಾಯಿ ದಾಖಲಾತಿ ಕೊಟ್ಟಿರುತ್ತಾರೆ ಯಾವ ದಾಖಲೆಯನ್ನು ನೀಡಿರುತ್ತಾರೆ ಎಂದು ಗೊತ್ತಿಲ್ಲ. ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗಾಗಲೇ ದಾವಾ ಸ್ವತ್ತುಗಳಲ್ಲಿ ವಿಭಾಗ ಆಗಿ ಖಾತೆ ಬದಲಾವಣೆಯಾಗಿರುವ ವಿಚಾರ ಗೊತ್ತಿದ್ದರು ಸಹ ವಿಭಾಗ ಆಗಿಲ್ಲ ಯಾವುದೇ ವಿಚಾರ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರು ಸಹ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**